ಯಾರಿದ್ದರಂತೆ? ಇಂಥವೇ ಪ್ರಶ್ನೆಗಳು. ಹತ್ತು ನಿಮಿಷ ಕಳೆಯುವ ಹೊತ್ತಿಗೆ ಟೀವಿಗಳಲ್ಲಿ ಹೆಚ್ಚಿನ ಮಾಹಿತಿಗಳು ಪ್ರಸಾರವಾದವು. ಕೆ.ಬಿ. ಹಿಲ್ಸ್‌ನ ಅವರ ಮನೆಯಲ್ಲಿ ನಿದ್ದೆಯಲ್ಲಿದ್ದಾಗಲೇ ಹೃದಯಾಘಾತವಾಯಿತಂತೆ!. ಅವರಿಗೆ ಎಪ್ಪತ್ತು ವರ್ಷವಾಗಿತ್ತು. ಮೂರೂವರೆ ದಶಕಗಳ ಕಾಲ ಇಂಗ್ಲಿಷ್ ಸಾಹಿತ್ಯ ಬೋಧಿಸಿದ, ಕನ್ನಡ, ಇಂಗ್ಲಿಷ್ ಎರಡಲ್ಲೂ ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಬಲರಾಮ್ ಕೊನೆಯ ಐದು ವರ್ಷ ಅಕ್ಷರಶಃ ಅನಾಮಿಕರಂತೆ ಇದ್ದರು. ಅನಾಮಿಕ ಅನ್ನೋ ಹೆಸರಿನಲ್ಲಿ ಮೂರು ಕಾದಂಬರಿಗಳು, ಹದಿನೆಂಟು ಕತೆಗಳನ್ನು ಬರೆದಿದ್ದರು. ಹೆಂಡತಿ ಸತ್ತ ಮೇಲೆ ಜೀವನದಲ್ಲಿ ಜಿಗುಪ್ಸೆ ಬಂದು ಒಬ್ಬರೇ ಇದ್ದರು... ಅನ್ನೋ ಮಾಹಿತಿ ಟೀವಿಗಳಿಂದ ಜನರಿಗೆ ಗೊತ್ತಾಯಿತು.

'ಹೇಗೆ ಬದುಕಬೇಕು ಅನ್ನಿಸಿತೊ ಹಾಗೇ ಬದುಕಿದ್ದ. ಅನ್ನಿಸಿದ್ದನ್ನು ನೇರವಾಗಿ ಹೇಳಿಬಿಡುವ ಜಾಯಮಾನ ಅವನದು. ಅವನ ಮೂರ್ನಾಲ್ಕು ವಿದ್ಯಾರ್ಥಿಗಳು ವೀಸಿಗಳಾದರು. ಅವನಿಗೂ ವೀಸಿ ಆಗುವ ಅರ್ಹತೆ ಇತ್ತು. ಆದರೆ, ಅದಕ್ಕೆ ಬೇಕಾದ ಮನಃಸ್ಥಿತಿ, ಶಿಸ್ತನ್ನು ಬೆಳೆಸಿಕೊಳ್ಳಲಿಲ್ಲ. ವ್ಯವಸ್ಥೆಯ ಬಗ್ಗೆ ಅವನಿಗೆ ರೋಷವಿತ್ತು. ಅವನ ಕೊನೆಯ ಕಾದಂಬರಿಗಳಲ್ಲಿ ದೇಶದ ಪ್ರಮುಖ ಚಳವಳಿಗಳ ಸೋಲು, ಮನುಷ್ಯನ ಸ್ವಾರ್ಥ ಕುರಿತೇ ಬರೆದಿದ್ದ. ಒಂದು ಕಾದಂಬರಿಯಲ್ಲಂತೂ ಹೆಣ್ಣನ್ನು ಸ್ವಂತ ಆಸ್ತಿ ಅಂತ ಭಾವಿಸುವ ಪುರುಷರ ಅಹಂಕಾರಗಳ ಬಗ್ಗೆ ಸೊಗಸಾಗಿ ಬರೆದಿದ್ದ. ಅವನ ಸಮಕಾಲೀನ ಲೇಖಕರು ಪ್ರಭುತ್ವವನ್ನು ಓಲೈಸಿಕೊಂಡು ಆಯಕಟ್ಟಿನ ಜಾಗಗಳಲ್ಲಿ ಕೂತು ವಿಜೃಂಭಿಸಿದ್ದನ್ನು ನೋಡಿ ಅಸಹ್ಯಪಟ್ಟುಕೊಂಡಿದ್ದ...' ಅಂತ ಬಲರಾಮ್ ಅವರ ಆತ್ಮೀಯರೊಬ್ಬರು ಟೀವಿ ಚಾನಲೊಂದಕ್ಕೆ ಹೇಳಿದ್ದು ಅನೇಕರಲ್ಲಿ ಕುತೂಹಲ ಹುಟ್ಟಿಸಿತು.

ಅನಾಮಿಕ ಹೆಸರಿನಲ್ಲಿ ಬರೆದ ಅರ್ಧಸತ್ಯ ಹೆಸರಿನ ಕಾದಂಬರಿ ಅವರ ಆತ್ಮಕಥೆಯಂತೆ. ತಮ್ಮ ಸ್ವಂತದ ಬದುಕನ್ನು ಕಾದಂಬರಿಯ ನಾಯಕನದು ಅಂತ ಅನ್ನಿಸುವ ಹಾಗೆ ಬರೆದಿದ್ದರು. ಹಲವು ಹೆಂಗಸರ ಜತೆ ಇದ್ದ ತಮ್ಮ ಸಂಬಂಧಗಳನ್ನು ನಾಯಕನಿಗೆ ಆರೋಪಿಸಿದ್ದರು. ಪ್ರಕಾಶಕರಿಗೂ ಅದು ಬಲರಾಮ್ ಆತ್ಮಕಥೆ ಅನ್ನೋದು ಗೊತ್ತಿರಲಿಲ್ಲವಂತೆ! ಅನೇಕ ಓದುಗರಿಗೆ ಅನಾಮಿಕ ಯಾರು ಅನ್ನೋದು ಗೊತ್ತೇ ಆಗಲಿಲ್ಲ. ಗೊತ್ತಿದ್ದವರು ದೂರದ ಅಮೆರಿಕದಲ್ಲಿ ಮುಖಮುಚ್ಚಿಕೊಂಡು ಕೂತು ಮನಸ್ಸಿನ ವಿಕಾರಗಳನ್ನು ಕಾರಿಕೊಂಡಿದ್ದಾನೆ ಅಂತ ಟೀಕಿಸಿದ್ದರು.

★★★

'ಸಾರ್, ನೀವು ಎನ್‌ಕ್ವಯರಿ ನೆಪದಲ್ಲಿ ಪ್ರಶ್ನೆಗಳನ್ನು ಕೇಳೋ ಮೊದಲು ನಾನೇ ಕೆಲವು ವಿಷಯಗಳನ್ನು ಹೇಳಿಬಿಡಬೇಕು ಅನ್ನಿಸ್ತಿದೆ. ಆಮೇಲೂ ಇನ್ನೇನಾದರೂ ಕೇಳಬೇಕು ಅನ್ನಿಸಿದರೆ ಕೇಳಿ' ಅನ್ನುತ್ತ ಅರುಣ ಇನ್‌ಸ್ಪೆಕ್ಟರ್ ಮುಖ ನೋಡಿದ.

'ಪ್ರೊ. ಬಲರಾಮ್ ನನ್ನ ತಂದೆ. ಅವರದು ಅನಂತಪುರ ಜಿಲ್ಲೆಯ ಊರವಕೊಂಡದ ಹತ್ತಿರ ಯಾವುದೋ ಊರು ಅಂತಷ್ಟೇ ನನಗೆ ಗೊತ್ತು. ಅಪ್ಪನ ತಂದೆ, ತಾಯಿ ಅಂದರೆ ನನ್ನ ಅಜ್ಜ ಅಜ್ಜಿಯರ ಬಗ್ಗೆ ಹೆಚ್ಚು ಗೊತ್ತಿಲ್ಲ. ಅವರ ಒಂದೇ ಒಂದು ಫೋಟೊ ಸಹ ನಮ್ಮ ಮನೆಯಲ್ಲಿ ಇರಲಿಲ್ಲ. ಫೋಟೊ ತೆಗೆಸಿಕೊಳ್ಳಲೂ ಆಗದಷ್ಟು ಬಡತನ ಇತ್ತಂತೆ ಅವರಿಗೆ! ಅಜ್ಜನ ಎರಡೆಕರೆ ಭೂಮಿಯನ್ನು ಭೂಮಾಲೀಕನೊಬ್ಬ ಕಬಳಿಸಿದನಂತೆ. ಅಜ್ಜ, ಪೀಪಲ್ ವಾರ್ ಗ್ರೂಪ್‌ನವರಿಗೆ ದೂರು ಕೊಡೋಕೆ ಹೋಗ್ತಾರೆ ಅನ್ನೋದು ಗೊತ್ತಾಗಿ ಆ ಭೂಮಾಲೀಕ, ಅಜ್ಜ, ಅಜ್ಜಿ ಇಬ್ಬರನ್ನೂ ಹಾಡಹಗಲೇ ಕೊಲ್ಲಿಸಿದನಂತೆ. ಆಗ ಅಪ್ಪ ಸ್ಕೂಲಲ್ಲಿ ಇದ್ದುದರಿಂದ ಬಚಾವಾದರು ಅಂತ ಅಮ್ಮ ಹೇಳ್ತಿದ್ದರು.

ಅಕ್ಷರ ಕಲಿಯೋಕೆ ನಾನು ತುಂಬಾ ಕಷ್ಟಪಟ್ಟಿದೀನಿ. ಕಷ್ಟ ಅಂದರೇನು ಅನ್ನೋದು ನಿನಗೆ ಗೊತ್ತಿಲ್ಲ ಅಂತ ಅಪ್ಪ ನನ್ನನ್ನು ಹೈಸ್ಕೂಲಿಗೆ ಸೇರಿಸುವಾಗ ಹೇಳಿದ್ದರು. ಅವರು ಅನಾಥಾಶ್ರಮದಲ್ಲಿದ್ದು

